ಜನತಾ ಮಾಧ್ಯಮ

07-12-2017 ಗುರುವಾರ ಪುಟ-2

ಹವಾಮಾನ

ಬುಧವಾರ ಗರಿಷ್ಠ ಉಷ್ಣಾಂಶ 28.2°, ಕನಿಷ್ಠ 24.2° ತೇವಾಂಶ:4.0°

ಕಾರಿನಲ್ಲಿ ಶವವಾಗಿ ಪತ್ತೆಯಾದ ಹಾಕಿ ಆಟಗಾರ, ಹಣೆಗೆ ಗುಂಡೇಟು

ನವದೆಹಲಿ : ದೆಹಲಿ ಅತ್ಯಾಚಾರ ಮತ್ತು ಕಗ್ಗೊಲೆಗಳ ರಾಜಧಾನಿ ಎಂಬ ಕುಖ್ಯಾತಿಗೆ ಪಾತ್ರವಾಗಿರುವಾಗಲೇ, ದಕ್ಷಿಣ ದಿಲ್ಲಿಯಲ್ಲಿ ರಾಷ್ಟ್ರೀಯ ಹಾಕಿ ಆಟಗಾರ ಮತ್ತು ಜಾಮಿಯಾ ಮಿಲಿಯಾ ಇಸ್ಲಾಮಿಯಾ ಕಾಲೇಜಿನ ವಿದ್ಯಾರ್ಥಿಯ ಶವ ಕಾರಿನಲ್ಲಿ ಪತ್ತೆಯಾಗಿದೆ. ಹಣೆಗೆ ಗುಂಡೇಟು ತಗುಲಿದ್ದು, ಇದು ಕೊಲೆಯೋ ಅಥವಾ ಆತ್ಮಹತ್ಯೆಯೋ ಎಂಬ ಬಗ್ಗೆ ಪೊಲೀಸರು ತನಿಖೆ ತೀವ್ರಗೊಳಿಸಿದ್ದಾರೆ.

ಪಶ್ಚಿಮ ದೆಹಲಿಯ ಸುಭಾಷನಗರದ ನಿವಾಸಿ ರಿಜ್ವಾನ ಖಾನ್(22) ನಿಗೂಢ ರೀತಿಯಲ್ಲಿ ಮೃತಪಟ್ಟಿದ್ದಾನೆ. ಪ್ರತಿಭಾವಂತ ಹಾಕಿ ಆಟಗಾರನಾಗಿದ್ದ ಖಾನ್ ಜಾಮಿಯಾ ವಿಶ್ವವಿದ್ಯಾಲಯದ ಎರಡನೇ ವರ್ಷದ ಕಲಾ ವಿಭಾಗದ ವಿದ್ಯಾರ್ಥಿ. ದಕ್ಷಿಣ ದೆಹಲಿಯಲ್ಲಿ ಸರೋಜಿನಿ ನಗರದಲ್ಲಿನ ತನ್ನ ಗೆಳತಿ ಮನೆ ಸನಿಹ ಪಾರ್ಕ್ ಮಾಡಿದ್ದ ಕಾರಿನಲ್ಲಿ ನಿನ್ನೆ ಈತನ ಶವ ಪತ್ತೆಯಾಗಿದೆ.

ಬೆಂಗಳೂರಿನ ವಾಯುಮಾಲಿನ್ಯ ಅಧ್ಯಯನ ನಡೆಸಲಿದೆ ಲಂಡನ್ ಮೂಲದ ಸಿ40 ಸಂಸ್ಥೆ

ಬೆಂಗಳೂರು - ನಗರದಲ್ಲಿ ಹೆಚ್ಚುತ್ತಿರುವ ವಾಯುಮಾಲಿನ್ಯ ಹತೋಟಿಗೆ ತರುವ ಕಾರ್ಯಕ್ಕೆ ಕೈ ಹಾಕಿರುವ ಮೇಯರ್ ಜಿ.ಸಂಪತ್‌ರಾಜ್ ಅವರು ಸಿಲಿಕಾನ್ ಸಿಟಿಯ ವಾಯು ಮಾಲಿನ್ಯ ತಪಾಸಣೆ ನಡೆಸುವ ಹೊಣೆಯನ್ನು ಲಂಡನ್ ಮೂಲದ ಸಿ40 ಸಂಸ್ಥೆಗೆ ವಹಿಸಲು ತೀರ್ಮಾನಿಸಿದ್ದಾರೆ. ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ ಅವರೊಂದಿಗೆ ನವದೆಹಲಿಗೆ ತೆರಳಿರುವ ಸಂಪತ್‌ರಾಜ್ ಅವರು ಲಂಡನ್ ಮೇಯರ್ ಸಾದಿಕ್ ಖಾನ್ ಅವರೊಂದಿಗೆ ಸಭೆ ನಡೆಸಿದರು. ಈ ಸಂದರ್ಭದಲ್ಲಿ ಬೆಂಗಳೂರಿನ ವಾಯುಮಾಲಿನ್ಯ ತಡೆಗಟ್ಟುವ ಕುರಿತಂತೆ ಲಂಡನ್ ಮೂಲದ ಸಿ40 ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತಂತೆ ತೀರ್ಮಾನ ಕೈಗೊಳ್ಳಲಾಯಿತು. ಸಿಲಿಕಾನ್ ಸಿಟಿಯ ವಾಯುಮಾಲಿನ್ಯ ಪರೀಕ್ಷೆ ಕುರಿತಂತೆ ಗುರುವಾರ ಲಂಡನ್ ಹಾಗೂ ಬೆಂಗಳೂರು ಪಾಲಿಕೆಗಳು ಒಡಂಬಡಿಕೆಗೆ ಸಹಿ ಹಾಕಲಿವೆ.

ಅರಕಲಗೂಡು ರಾಮನಾಥಪುರ ಹೋಬಳಿಯ ಬೆಟ್ಟಸೋಗೆ ಗ್ರಾಮದ ಯುಕವರು ಕನಕ ಜಯಂತಿ ಅಂಗವಾಗಿ ಬಸವಾಪಟ್ಟಣ ಮುಖ್ಯರಸ್ತೆಯಲ್ಲಿ ಕನಕದಾಸರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಸಿ ಕುಣಿದು ಸಂಭ್ರಮಿಸಿದರು.

ಮಣ್ಣಿನ ಫಲವತ್ತತೆ ಹಾಳಾಗಲು ರಾಸಾಯನಿಕ ಗೊಬ್ಬರವೇ ಕಾರಣ

ಬೇಲೂರು: ಮಣ್ಣಿನ ಫಲವತ್ತತೆ ಹಾಳಾಗಲು ರಾಸಾಯನಿಕ ಗೊಬ್ಬರವೇ ಕಾರಣವಾಗಿದ್ದು, ಮಣ್ಣಿನ ಫಲವತ್ತತೆ ಕಾಪಾಡಲು ರೈತರು ಹೆಚ್ಚು ಸಾವಯವ ಗೊಬ್ಬರ ಬಳಸಬೇಕು ಎಂದು ಜಿಪಂ ಸದಸ್ಯೆ ಲತಾ ಮಂಜೇಶ್ವರಿ ಹೇಳಿದರು.

ಪಟ್ಟಣದ ಕೃಷಿ ಇಲಾಖೆ ಆವರಣದಲ್ಲಿ ವಿಶ್ವಮಣ್ಣು ಆರೋಗ್ಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ನಮ್ಮ ದೇಶದಲ್ಲಿರುವ ಭೂಮಿ ಪ್ರಪಂಚದ ಯಾವ ದೇಶದಲ್ಲಿಯೂ ಇಲ್ಲ. ಇಂದು ನಾವುಗಳು ಬೆಳೆ ಬೆಳೆಯುವ ಉದ್ದೇಶದಿಂದ ಮಣ್ಣಿಗೆ ರಾಸಾಯನಿಕ ಗೊಬ್ಬರವನ್ನು ಹೆಚ್ಚಾಗಿ ಬಳಕೆ ಮಾಡಿ ಭೂಮಿಯನ್ನು ಸಾಯಿಸುತ್ತಿದ್ದೇವೆ. ಆದರೆ ಮಣ್ಣಿನ ಮೇಲ್ ಮೈ ಸೃಷ್ಟಿಯಾಗಲು ಸಾವಿರಾರು ವರ್ಷಗಳು ಬೇಕು. ಹಾಗೂ ಮುಂದಿನ ಪೀಳಿಗೆಗೆ ಮಣ್ಣಿನ ಆರೋಗ್ಯ ಮತ್ತು ಮಣ್ಣಿನಲ್ಲಿರುವ ಸೂಕ್ಷ್ಮಾಣುಗಳನ್ನು ಕಾಪಾಡುವುದಕ್ಕೆ ಪ್ರತಿಯೊಬ್ಬರು ಮುಂದಾಗಬೇಕು ಹಾಗೂ ಮಣ್ಣು ಮತ್ತು ಮಣ್ಣಿನ ಪ್ರಾಮುಖ್ಯತೆ ಬಗ್ಗೆ ರೈತರು ಮೊದಲು ತಿಳಿದುಕೊಳ್ಳಬೇಕಿದೆ. ಇದರಿಂದ ಮಣ್ಣಿನ ಆರೋಗ್ಯ ಕಾಪಾಡಲು ಸಾಧ್ಯ ಎಂದರು.

ತಾಪಂ ಅಧ್ಯಕ್ಷ ಹರೀಶ್ ಮಾತನಾಡಿ, ನಮ್ಮ ರೈತರು ತಮ್ಮ ಜಮೀನುಗಳಲ್ಲಿನ ಮಣ್ಣಿನ ಆರೋಗ್ಯವನ್ನು ಕಾಪಾಡಲು ಬೇಕಾದ ಪೋಷಕಾಂಶಗಳನ್ನು ಕೊಟ್ಟಲ್ಲಿ, ಮಣ್ಣಿನ ಆರೋಗ್ಯವನ್ನು ಕಾಪಾಡಬಹುದಾಗಿದೆ. ಇಲ್ಲದಿದ್ದಲ್ಲಿ ಉತ್ತಮ ಬೆಳೆ ಬೆಳೆಯಲು ಸಾಧ್ಯವಿಲ್ಲ, ಆದ್ದರಿಂದ ಮಣ್ಣಿನ ಆರೋಗ್ಯವನ್ನು ಕಾಪಾಡುವುದಕ್ಕೆ ಮುಂದಾಗಬೇಕು. ಜಮೀನುಗಳಲ್ಲಿ ಬೆಳೆ ಬೆಳೆಯಲು ಹೆಚ್ಚು ನೀರನ್ನು ವ್ಯರ್ಥ ಮಾಡುವುದನ್ನು ಬಿಟ್ಟು, ರೈತರು ಹನಿ ನೀರಾವರಿಯನ್ನು ಅಳವಡಿಸಿ ಕೊಂಡರೆ ನೀರನ್ನು ಉಳಿಸಬಹುದಾಗಿದೆ. ನಮ್ಮ ರೈತರು ಹೆಚ್ಚಾಗಿ ಸಾವಯವ ಗೊಬ್ಬರವನ್ನು ಬಳಸಿದರೆ ಮಣ್ಣಿನ ಫಲವತ್ತತೆ ಹಾಗೂ ಉತ್ತಮ ಬೆಳೆಯನ್ನು ಪಡೆಯಬಹುದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ತಾಪಂ ಸದಸ್ಯರಾದ ರವಿಕುಮಾರ್, ಕಮಲಮ, ಕೃಷಿ ಅಧಿಕಾರಿ ಮಲ್ಲೇಶ್‌ಗೌಡ, ಪ್ರಕಾಶ್, ಕಾವ್ಯ ಇನ್ನಿತರರಿದ್ದರು.

ಮಾಧ್ಯಮ ಕಾರ್ಯಾಗಾರ

ಹಾಸನ : ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಇವರ ವತಿಯಿಂದ ಡಿ.9 ರಂದು ಬೆಳಗ್ಗೆ 11 ಗಂಟೆಗೆ ಮಾಧ್ಯಮ ಕಾರ್ಯಾಗಾರವನ್ನು ಹಾಸನ ಹೊಳೆನರಸೀಪುರ ರಸ್ತೆಯಲ್ಲಿ ಹಿಮತ್ ಸಿಂಗ್‌ಕಾ ಲೆನಿನ್ಸ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಕನ್ನಡಪ್ರಭ ದಿನಪತ್ರಿಕೆಯ ಸಂಪಾದಕರಾದ ರವಿ ಹೆಗಡೆ ಅವರು ನೆರವೇರಿಸುವರು. ಪ್ರಜಾವಾಣಿ ನಿವೃತ್ತ ಕಾರ್ಯ ನಿರ್ವಾಹಕ ಸಂಪಾದಕರಾದ ಪದ್ಮರಾಜ ದಂಡಾವತಿ ಅವರು ಅಧ್ಯಕ್ಷತೆವಹಿಸುವರು. ಅತಿಥಿಗಳಾಗಿ ವಿಜಯವಾಣಿ ಸಹಾಯಕ ಸಂಪಾದಕರಾದ ಭಾರತಿ ಹೆಗಡೆ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಎನ್.ರಾಜು, ಹಿರಿಯ ಪತ್ರಕರ್ತರಾದ ಎಸ್.ಎನ್.ಮಂಜುನಾಥ ದತ್ತ, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಟಿ.ವಿ. ಶಿವಾನಂದ ತಗಡೂರು ಅವರು ಭಾಗವಹಿಸುವರು. ಸಮಾರೋಪ ಕಾರ್ಯ ಕ್ರಮವು ಸಂಜೆ 3.30 ಗಂಟೆಗೆ ನಡೆಯಲಿದೆ. ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳ ಮಾಧ್ಯಮ ಸಮನ್ವಯಕಾರ ಕೆ.ವಿ. ಪ್ರಭಾಕರ್ ಅವರು ಭಾಗವಹಿಸಲಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಅಭ್ಯು ದಯ ಸಹಕಾರ ಸಂಘದ ಅಧ್ಯಕ್ಷ ಕೆ.ದೀಪಕ್ ಅವರು ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಮೈಸೂರು ಕೈಗಾರಿಕೆಗಳ ಸಂಘದ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್, ಮಾಧ್ಯಮ ಅಕಾಡೆಮಿಯ ಸದಸ್ಯ ಹೆಚ್.ಬಿ. ಮದನಗೌಡ, ಹಾಸನ ಹಿಮತ್ ಸಿಂಗ್‌ಕಾ ಲೆನಿನ್ಸ್ ಅಸೋಸಿಯೇಟ್ ಉಪಾಧ್ಯಕ್ಷ ವಿನೋದ್ ಕೆ.ಬಿ ಮತ್ತಿತರರು ಭಾಗವಹಿಸುವರು.

ಮೊಬೈಲ್ ಬಳಕೆಯಿಂದ ಪತ್ರ ಬರೆಯುವ ಹವ್ಯಾಸ ಕ್ಷೀಣ

ತಂದೆ, ತಾಯಿಗೆ ಪತ್ರ ಬರೆಯುವುದು ವಿಶಿಷ್ಠ ಅನುಭವ



ಶ್ರವಣಬೆಳಗೊಳ: ಉತ್ತಮ ಸಂಸ್ಕಾರ ಎಲ್ಲಾ ಕಾಲಕ್ಕೂ ಬೇಕು. ತಂದೆ-ತಾಯಿ, ಬಂಧು-ಮಿತ್ರರಿಗೆ ಹಾಗೂ ವ್ಯವಹಾರಗಳಿಗೆ ಪತ್ರ ಬರೆಯುವುದು ಒಂದು ವಿಶಿಷ್ಠ ಅನುಭವ ನೀಡುತ್ತದೆ ಎಂದು ಸ್ವಸ್ತೀಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ತಿಳಿದರು.

ಮಹಾಮಸ್ತಕಾಭಿಷೇಕ ಮಹೋತ್ಸವ ನಿಮಿತ್ತ ಶ್ರವಣಬೆಳಗೊಳದ ಶ್ರೀ ಕಾನಜಿ ಯಾತ್ರಿಕಾಶ್ರಮದಲ್ಲಿ ಭಾರತೀಯ ಅಂಚೆ ಇಲಾಖೆ ಸಹಯೋಗದಲ್ಲಿ ಏರ್ಪಡಿಸಿದ್ದ ಮೈಸ್ಟಾಂಪ್, ವಿಶೇಷ ಅಂಚೆ ಲಕೋಟೆ ಹಾಗೂ ವಿಶೇಷ ದಿನಾಂಕ ಮುದ್ರೆಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಮೊಬೈಲ್ ಬಳಕೆಯಿಂದ ಇತ್ತೀಚಿನ ದಿನಗಳಲ್ಲಿ ಪತ್ರ ಬರೆಯುವ ಹವ್ಯಾಸ ಕಡಿಮೆಯಾಗಿದೆ. ಪತ್ರಗಳು ನಮ್ಮ ಜೀವನದಲ್ಲಿ ಹಲವು ಇತಿಹಾಸಗಳನ್ನು ನೆನಪಿಸುತ್ತವೆ ಎಂದರು. ಸ್ಟಾಂಪ್‌ನಲ್ಲಿ ರೈಲ್ವೆ ಇಂಜಿನ್ ಮತ್ತು ಮಹಾಮಸ್ತಕಾಭಿಷೇಕ ಮಹೋತ್ಸವ-2018 ರ ಲಾಂಛನ ಚಿಹ್ನೆಯಿದ್ದು ಸಾವಿರಾರು ವರ್ಷದ ಇತಿಹಾಸವನ್ನು ನೆನಪಿಸುತ್ತದೆ ಎಂದು ತಿಳಿಸಿದರು.

ಯಾತ್ರಾರ್ಥಿಗಳಿಗೆ ಹಾಗೂ ಪ್ರವಾಸಿಗರಿಗೆ ಅಂಚೆ ಚೀಟಿಗಳು ಸುಲಭ ರೀತಿಯಲ್ಲಿ ದೊರೆಯುವಂತೆ ವಿಂಧ್ಯಗಿರಿಬೆಟ್ಟದ ಕೆಳ ಭಾಗದಲ್ಲೇ ವ್ಯವಸ್ಥೆ ಮಾಡಬೇಕು ಎಂದರು. ಮಹಾಮಸ್ತಕಾಭಿಷೇಕದ ಪ್ರಯುಕ್ತ ಎಷ್ಟೋ ಕಾರ್ಯಕ್ರಮಗಳು ನಡೆಯುತ್ತಿದ್ದರು ಅಂಚೆ ಇಲಾಖೆಯ ಈ ಕಾರ್ಯಕ್ರಮ ಸ್ಮರಣೀಯ ಎಂದರು. ನಂತರ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರ ಕುಮಾರ್ ರವರಿಗೆ ಪತ್ರ ಬರೆಯುವ ಮೂಲಕ ವಿಶೇಷವಾಗಿ ಮಹಾಮಸ್ತಕಾಭಿಷೇಕ ಮಹೋತ್ಸ ವಕ್ಕೆ ಆಹ್ವಾನಿಸಿದ್ದು ವಿಶೇಷವಾಗಿತ್ತು.

ನಂತರ ದಕ್ಷಿಣ ಕರ್ನಾಟಕ ಪ್ರಾಂತ್ಯದ ಪೋಸ್ಟ್‌ಮಾಸ್ಟರ್ ಜನರಲ್ ಎಸ್.ರಾಜೇಂದ್ರ ಕುಮಾರ್ ಮಾತನಾಡಿ, ಮೈಸ್ಟಾಂಪ್ ಇತ್ತೀಚಿಗೆ ಆರಂಭಗೊಂಡ ಯೋಜನೆ. ಈ ವಿಶೇಷ ಸಂದರ್ಭದಲ್ಲಿ ಸಂಸ್ಥೆಯ ಲಾಂಛನ ಬಿಡುಗಡೆ ಮಾಡಲಾಗುತ್ತದೆ. ಇದರ ಮುಖ್ಯ ಉದ್ದೇಶ ಸಂತೋಷದ ಸಮಯವನ್ನು ಬಹುಕಾಲ ನೆನಪಿನಲ್ಲಿಟ್ಟುಕೊಳ್ಳುವಂತೆ ಮಾಡುವುದು ಎಂದು ಹೇಳಿದರು. ಕರ್ನಾಟಕದಲ್ಲಿ ಜೈನ ಇತಿಹಾಸ ಶ್ರೀಮಂತವಾಗಿದ್ದು, ಈ ನೆನಪನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಬೇಕು ಎಂದ ಅವರು, ಇನ್ನೆರಡು ತಿಂಗಳಲ್ಲಿ ಅಂಚೆ ಚೀಟಿ ಸಂಗ್ರಹಾಲಯ ತೆರೆಯುವ ಆಶಾವಾದ ವ್ಯಕ್ತಪಡಿಸಿದರು.

ನಂತರ ಮಹಾಮಸ್ತಕಾಭಿಷೇಕ ಮಹೋತ್ಸವ ಸಾಂಸ್ಕೃತಿಕ ಕಾರ್ಯಕ್ರಮಗಳ ಉಪ ಸಮಿತಿ ಅಧ್ಯಕ್ಷ ಎಸ್.ಎನ್.ಅಶೋಕ್ ಕುಮಾರ್ ಮಾತನಾಡಿ, 1981 ರ ಮಹಾಮಸ್ತಕಾಭಿಷೇಕ ಸಮಯದಲ್ಲಿ 1 ರೂ. ಬೆಲೆಯ ಅಂಚೆ ಚೀಟಿಯನ್ನು ಬಿಡುಗಡೆ ಮಾಡಲಾಗಿತ್ತು. ಈಗ 36 ವರ್ಷಗಳ ನಂತರ ಮತ್ತೆ ಬಿಡುಗಡೆ ಮಾಡುತ್ತಿರುವುದು ವಿಶೇಷವಾಗಿದೆ ಎಂದು ತಿಳಿಸಿದರು. 1910 ರ ಮಹಾಮಸ್ತಕಾಭಿಷೇಕ ಸಂದರ್ಭದಲ್ಲಿ ಭಾರತೀಯ ಅಂಚೆ ಇಲಾಖೆ ಅಷ್ಟು ಪ್ರಬಲವಾಗಿರಲಿಲ್ಲ, ಅಂದು ನಡೆದ ಮಹಾಮಸ್ತಕಾಭಿಷೇಕ ವರದಿಯನ್ನು ಮದ್ರಾಸ್ ಮೇಲ್ ಪತಿಕೆಗೆ ಪಾರಿ ವಾಳ ಬಳಸಿ ಮದ್ರಾಸಿಗೆ ಕಳಿಸಿಕೊಟ್ಟಿದ್ದರು. ಅದು ಅಂದಿನ ಸಂಜೆ ಪತ್ರಿಕೆಯಲ್ಲಿ ಪ್ರಕಟವಾಗಿತ್ತು ಎಂದು ನೆನಪಿಸಿಕೊಂಡರು.

ಕಾರ್ಯಕ್ರಮದಲ್ಲಿ ಖ್ಯಾತ ಅಂಚೆ ಚೀಟಿ ಸಂಗ್ರಹಕಾರ ಮಹಾವೀರ ಕುಂದೂರು, ಮಹಾಮಸ್ತಕಾಭಿಷೇಕ ಮಹೋತ್ಸವ ರಾಷ್ಟ್ರೀಯ ಸಮಿತಿ ಕಾರ್ಯಾಧ್ಯಕ್ಷ ಎಸ್. ಜಿತೇಂದ್ರ ಕುಮಾರ್, ಹಾಸನದ ಸೂಪರಿಟೆಂಡೆಂಟ್ ಪೋಸ್ಟ್ ಆಫೀಸರ್ ಎಸ್.ಸದಾನಂದ, ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಅಂಚೆ ಪಾಲಕರು ಹಾಗೂ ಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿದ್ಯುತ್ ವ್ಯತ್ಯಯ

ಹಾಸನ : ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ನಗರ ಉಪವಿಭಾಗ ವ್ಯಾಪ್ತಿಯಲ್ಲಿ ಹಾಸನಾಂಭ ಫೀಡರ್‌ನ ನಿರ್ವಹಣೆ ಮತ್ತು ರಸ್ತೆಯ ಅಗಲೀಕರಣ ಇರುವುದರಿಂದ ವಿದ್ಯುತ್ ಮಾರ್ಗವನ್ನು ಹಾಗೂ ವಿದ್ಯುತ್ ಪರಿವರ್ತಕವನ್ನು ಸ್ಥಳಾಂತರಿಸುವ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಡಿ.7 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಮಹಾರಾಜ ಪಾರ್ಕ್ ಹತ್ತಿರ, ಎ.ವಿ.ಕೆ ಕಾಲೇಜು ರಸ್ತೆ, ಹಳೆ ಬಸ್ ನಿಲ್ದಾಣದ ಎದುರು ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ನಿಗಮದೊಂದಿಗೆ ಸಹಕರಿಸಬೇಕೆಂದು ಚಾ.ವಿ.ಸ.ನಿ.ನಿ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.

ಬೆಂಕಿ ಹಚ್ಚದಿರಿ

ಕಸದ ತೊಟ್ಟಿಗಳಲ್ಲಿ ಪ್ಲಾಸ್ಟಿಕ್ ರಾಶಿಗೆ, ಬೇರೆ ಯಾವುದೇ ಕಸದ ಗುಡ್ಡೆಗಳಿಗೆ ಬೆಂಕಿ ಹಚ್ಚುವಂತಹ ಪರಿಸರ ವಿರೋಧಿ ಕೆಲಸ ಮಾಡದಿರಿ.

ಡಾಂಬರೀಕರಣಕ್ಕೆ 7ಕೋ. ಬಿಡುಗಡೆ

ನುಗ್ಗೇಹಳ್ಳಿ: ನುಗ್ಗೇಹಳ್ಳಿಯಿಂದ ಅಕ್ಕನಹಳ್ಳಿ ಮಾರ್ಗ ಹಿರಿಸಾವೆಗೆ ಸಂಪರ್ಕ ಕಲ್ಪಿಸುವ ರಸ್ತೆ ಡಾಂಬರೀಕರಣಕ್ಕಾಗಿ ಸಿ.ಆರ್.ಎಫ್.ವತಿಯಿಂದ ರೂ.7ಕೋಟಿ ಹಣ ಬಿಡುಗಡೆಯಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ತಿಳಿಸಿದರು.

ಹೋಬಳಿ ಕೇಂದ್ರದ ವ್ಯವಸಾಯೋತ್ಪನ್ನ ಸಹಕಾರ ಸಂಘದ ಆವರಣದಲ್ಲಿ ಹೇಮಾವತಿ ಸಕ್ಕರೆ ಕಾರ್ಖಾನೆ ಷೇರುದಾರರಿಗೆ ಸಕ್ಕರೆ ವಿತರಣೆ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಹೊನ್ನಮಾರನಹಳ್ಳಿ ರಸ್ತೆ ಅಭಿವೃದ್ಧಿ ಪಡಿಸಿದರೆ ಜಿಲ್ಲಾ ಕೇಂದ್ರ ಹಾಸನಕ್ಕೆ ತೆರಳಲು ಹಿರಿಸಾವೆ ನುಗ್ಗೇಹಳ್ಳಿ ವ್ಯಾಪ್ತಿಯ ಜನರಿಗೆ ಸುಮಾರು 5ಕಿ.ಮೀ ಕಡಿಮೆಯಾಗುತ್ತದೆ. ಬೆಂಗಳೂರು ಹಾಸನದಿಂದ ಶ್ರವಣಬೆಳಗೊಳ ನುಗ್ಗೇಹಳ್ಳಿ ಲಕ್ಷ್ಮಿನರಸಿಂಹಸ್ವಾಮಿ ಹಾಗೂ ನಾಗರ ನವಿಲೆ ನಾಗೇಶ್ವರಸ್ವಾಮಿ ಕ್ಷೇತ್ರಗಳಿಗೆ ಆಗಮಿಸುವ ಭಕ್ತರು ಹಾಗೂ ಪ್ರವಾಸಿಗರಿಗೂ ಹೆಚ್ಚು ಅನುಕೂಲವಾಗುತ್ತದೆ. ನುಗ್ಗೇಹಳ್ಳಿಯಿಂದ ಜಂಬೂರು ಕೆರೆ ಕೋಡಿಯವರೆಗೆ ರಸ್ತೆ ಅಗಲೀಕರಣಕ್ಕೆ 75ಲಕ್ಷ ರೂ ಹಣ ಬಿಡುಗಡೆಯಾಗಿದೆ5 ಕೋಟಿ ವೆಚ್ಚದ ಆಸ್ಪತ್ರೆ ಕಾಮಗಾರಿ 6ತಿಂಗಳಲ್ಲಿ ಮುಗಿಯಲಿದೆ. 1300ರೂ ಬೆಲೆಯ 25ಕೆ.ಜಿ.ಸಕ್ಕರೆಯನ್ನು ಎಲ್ಲಾ ಷೇರುದಾರರಿಗು ವಿತರಣೆ ಮಾಡಲಾಗುತ್ತದೆ ಕಾರ್ಖಾನೆ ಲೀಸ್‌ಗೆ ನೀಡಿದ್ದ ಹಣ 25 ಕೋಟಿ ಠೇವಣಿ ನೀಡಲಾಗಿದೆ ಕಾರ್ಖಾನೆಯನ್ನು1250ಟನ್ ಕಬ್ಬು ಅರೆಯುವ ಸಾಮರ್ಥ್ಯಕ್ಕೆ ಹೆಚ್ಚಿಸಲಾಗಿದೆ. ಕಬ್ಬು ಬೆಳೆಯುವ ರೈತರಿಗೆ ಮಾತ್ರ ಕಬ್ಬಿನ ಬೀಜ ವಿತರಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ವೆಂಕಟೇಶ್.ಎ.ಪಿ.ಎಂ.ಸಿ.ಅಧ್ಯಕ್ಷ ಮಂಜಣ್ಣ, ಕಾರ್ಖಾನೆ ನಿರ್ದೇಶಕಿ ಭಾರತಿಶಿವಪ್ಪ, ಮುಖಂಡರುಗಳಾದ ದೊರೆಸ್ವಾಮಿ, ಬಸವನಪುರ ಪ್ರಕಾಶ್, ಸ್ವಾಮಿ, ಪಟೇಲ್ ಕುಮಾರ್,ರಾಜೇಗೌಡ, ಕೆಂಪನಂಜೇಗೌಡ, ಚಂದ್ರೇಗೌಡ, ಮುರುಳಿ,ಇತರರು ಹಾಜರಿದ್ದರರು.

ಮಕ್ಕಳ ಪ್ರತಿಭೆ ಗುರುತಿಸಲು ಚಿತ್ರಕಲೆ ಸಹಕಾರಿ

ಬೇಲೂರು: ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಲು ವಿಜ್ಞಾನ ವಸ್ತು ಪ್ರದರ್ಶನ ಹಾಗೂ ಚಿತ್ರಕಲೆ ಪ್ರದರ್ಶನಗಳು ಸಹಕಾರಿಯಾಗಲಿವೆ ಎಂದು ಕ್ಷೇತ್ರ ಶಿಕ್ಷಣ ಇಲಾಖೆ ಸಂಯೋಜಕ ಕಾಂತರಾಜು ಹೇಳಿದರು.

ಎನ್.ನಿಡಗೋಡು ಸಮೀಪದ ಯುನೈಟೆಡ್ ಅಕಾಡೆಮಿ ಶಾಲೆಯಲ್ಲಿ ಏರ್ಪಡಿಸಿದ್ದ ವಿಜ್ಞಾನ ವಸ್ತು ಪ್ರದರ್ಶನ ಹಾಗೂ ಚಿತ್ರಕಲೆ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಕಲೆ, ಸಾಹಿತ್ಯ, ಸಂಗೀತ ಹಾಗೂ ಕ್ರೀಡೆ ಮತ್ತು ವಿಜ್ಞಾನ ವಸ್ತು ಪ್ರದರ್ಶನ ಕಲಾ ಪ್ರದರ್ಶನ ಇನ್ನಿತರೆ ಚಟುವಟಿಕೆಗಳಲ್ಲಿ ತೊಡಗಿಸುವುದರಿಂದ ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಗುರುತಿಸಲು ಸಾಧ್ಯ. ಅಲ್ಲದೆ ಮಕ್ಕಳಿಗೆ ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆ ಎಂಬುದನ್ನು ಮನಗಂಡು ಪೋಷಕರು ಹಾಗೂ ಶಿಕ್ಷಕರು ಮಕ್ಕಳಿಗೆ ಅದರಲ್ಲಿಯೆ ಹೆಚ್ಚಿನ ಸಹಕಾರ ನೀಡಬೇಕು. ಇದರಿಂದ ಮಕ್ಕಳು ಇಂದಿನ ಸ್ಪರ್ಧಾತ್ಮಕ ಜೀವನದಲ್ಲಿ ಉತ್ತಮ ಸಾಧನೆಗಳನ್ನು ಮಾಡಲು ಸಾಧ್ಯ ಎಂದರು.

TED ACADEMY ENGLISH MEDIUM SCHOOL
GLISH, SCIE E, A T CRAFT
EXHI ON

ನಂತರ ಮಾತನಾಡಿದ ಯುನೈಟೆಡ್ ಅಕಾಡೆಮಿ ಶಾಲೆ ಕಾರ್ಯದರ್ಶಿ ವಿ.ಎಸ್.ಭೋಜೇಗೌಡ, ಮಕ್ಕಳಲ್ಲಿರುವ ಪ್ರತಿಭೆಗಳನ್ನು ಗುರುತಿಸುವ ನಿಟ್ಟಿನಲ್ಲಿ ಪ್ರತಿವರ್ಷ ನಮ ಸಂಸ್ಥೆಯಿಂದ ಶಾಲೆಯಲ್ಲಿ ಎಲ್ಲ ತರಗತಿ ವಿದ್ಯಾರ್ಥಿಗಳಿಗನುಗುಣವಾಗಿ ಇಂತಹ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗುತ್ತಿದೆ. ವಿಶೇಷವೆಂದರೆ ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳಲ್ಲಿ ಆಸಕ್ತಿ ಹೆಚ್ಚಾಗಿ ಹೊಸ ಹೊಸ ಪ್ರಯೋಗಗಳನ್ನು ಮಾಡುವ ಮೂಲಕ ವಿಜ್ಞಾನ ಕ್ಷೇತ್ರದಲ್ಲಿ ವಿವಿಧ ಸಾಧನೆಗಳನ್ನು ಕಾಣುವಂತೆ ಮಾಡುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಲು ಸಾಧ್ಯವಾಗಲಿದೆ ಎಂದರು.

ಪೋಷಕರಾದ ರಾಘವೇಂದ್ರ ಹೊಳ್ಳ, ಬಿ.ಎಲ್.ಲಕ್ಷ್ಮಣ್, ಸತೀಶ್, ರೂಪ , ಯುನೈಟೆಡ್ ಅಕಾಡೆಮಿ ಶಾಲೆ ಟ್ರಸ್ಟಿ ಮಹೇಶ್, ಮುಖ್ಯ ಶಿಕ್ಷಕಿ ದೀಪಾ, ಶಿಕ್ಷಕ ಪಾಟೀಲ್ ಇದ್ದರು.

ಸಾಲಭಾದೆ: ರೈತ ಆತ್ಮಹತ್ಯೆ

ರಾಮನಾಥಪುರ : ಬೆಳೆದ ಬೆಳೆಗಳು ಕೈಗೆ ಬಾರದ ಪರಿಣಾಮ, ಮಾಡಿದ್ದ ಸಾಲ ತೀರಿಸಲು ಸಾಧ್ಯವಾಗುವುದಿಲ್ಲ ಎಂದು ನೊಂದ ರೈತ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ದೊಡ್ಡಮಗ್ಗೆ ಹೋಬಳಿಯ ಮುಗಳೂರು ಗ್ರಾಮದ ನಾಗರಾಜ (35) ಮೃತ ದುರ್ದೈವಿ. ಬೆಟ್ಟದಪುರ ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ಬ್ಯಾಂಕಿನಲ್ಲಿ 4 ಲಕ್ಷದ 80 ಸಾವಿರ ರೂ ಸಾಲ ಮಾಡಿದ್ದು ಜಮೀನಿನಲ್ಲಿ ಕೊರೆಸಿದ್ದ ಕೊಳವೆಬಾವಿ ಬತ್ತಿಹೋಗಿ ಬೆಳೆದ ಬೆಳೆಗಳು ಹಾಳಾದ್ದರಿಂದ ಸಾಲ ತೀರಿಸಲು ಸಾಧ್ಯವಾಗುವುದಿಲ್ಲ ಎಂದು ಹೆದರಿ ಹೊಗೆಸೊಪ್ಪಿನ ಬ್ಯಾರಲ್ ಮನೆಗೆ ಹೋಗಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹಾಲುಮತ ಸಮಾಜ ಸಂಘಟಿತವಾಗಬೇಕು

ಅರಕಲಗೂಡು: ತಾಲೂಕಿನ ಬೆಟ್ಟಸೋಗೆ, ದೊಳ್ಳೇನಹಳ್ಳಿ, ಹಾನಗಲ್ ಕೊಪ್ಪಲು ಗ್ರಾಮದಲ್ಲಿ ಸಂತ ಶ್ರೇಷ್ಠ ಕನಕದಾಸರ 530ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಕುರುಬರ ಸಂಘದ ನಿರ್ದೇಶಕ ಅನಿಲ್‌ಕುಮಾರ್ ಎಲ್ಲಾ ಸಮಾಜಗಳ ಮೂಲ ಹಾಲುಮತ ಸಮಾಜದಲ್ಲಿ ಅನೇಕ ಐತಿಹಾಸಿಕ ವ್ಯಕ್ತಿಗಳಿದ್ದರೂ ಕೂಡ ಪ್ರಸ್ತುತ ಮೌಢ್ಯದಲ್ಲಿದೆ. ತಾಲೂಕಿನಲ್ಲಿ ರಾಜಕೀಯವಾಗಿ ದೊರಕಬೇಕಾದ ಸ್ಥಾನ- ಮಾನಗಳು ಲಭಿಸಿಲ್ಲ, ಸಮಾಜದ ಜನತೆ ಸಂಘಟಿತರಾದರೆ ಮುಂಬರುವ ಚುನಾವಣೆಯಲ್ಲಿ ಶಾಸಕರನ್ನು ಆಯ್ಕೆ ಮಾಡುವುದು ಸುಲಭವಾಗಲಿದೆ. ನಾಯಕತ್ವವನ್ನು ಬೆಳೆಸಿಕೊಳ್ಳದಿದ್ದರೆ ಮತ್ತು ಜಾಗೃತರಾಗದಿದ್ದರೆ ರಾಜಕೀಯ ನೆಲೆ ಇಲ್ಲವಾಗುತ್ತದೆ ಎಂದರು ಕಿವಿಮಾತು ಹೇಳಿದರು.

ಕೆ.ಪಿ.ಸಿ.ಸಿ ಹಿಂದುಳಿದ ವರ್ಗಗಳ ಪ್ರಧಾನ ಕಾರ್ಯದರ್ಶಿ ಎಂ.ಕೆ.ಶೇಷೆಗೌಡ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕುರುಬ ಸಮಾಜದ ಪರಂಪರೆ ಉತ್ತಮವಾದ್ದದು. ಐತಿಹಾಸಿಕ ಪುರುಷರು ಸಮಾಜದ ಹಿರಿಮೆಯನ್ನು ಹೆಚ್ಚಿಸಿರುವುದು ಹೆಮ್ಮೆಯ ಸಂಗತಿ ಎಂದರು.

ಕಾಂಗ್ರೆಸ್ ಯುವ ಮುಖಂಡ ಪ್ರಸನ್ನಕುಮಾರ್ ಮಾತನಾಡಿದರು. ಮುಖಂಡರಾದ ಮಲ್ಲೇಶ್, ನಾಗರಾಜು, ಹರೀಶ್, ಕಿರಣ್‌ಕುಮಾರ್, ಪುಟ್ಟರಾಜು, ತಿಮ್ಮನಾಯಕ, ಚಂದ್ರೇಗೌಡ, ಮೋಹನ್, ಪ್ರಕಾಶ್, ಅಣ್ಣಯ್ಯ, ಮಹಾದೇವ್, ಜಯರಾಮ್, ಧರ್ಮ ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.

ವೇದಿಕೆ ಕಾರ್ಯಕ್ರಮದ ಬಳಿಕ ಕನಕದಾಸರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಸಲಾಯಿತು.

ಸ್ಮಾರಕಗಳ ರಕ್ಷಣೆ ಅಗತ್ಯ

ರಾಮನಾಥಪುರ : ನಮ್ಮ ನಾಡಿನ ಕಲೆ ಸಂಸ್ಕೃತಿಯನ್ನು ಬಿಂಬಿಸುವ ಸ್ಮಾರಕಗಳನ್ನು ಕಣ್ಮರೆಯಾಗದಂತೆ ಸಂರಕ್ಷಿಸಿ ಪುನಶ್ಚೇತನ ನೀಡುವ ಅಗತ್ಯವಿದೆ ಎಂದು ಇಲ್ಲಿಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಪ್ರದೀಪ್ ಅಭಿಪ್ರಾಯಪಟ್ಟರು.

ಜಿಲ್ಲಾ ಕಾವೇರಿ ಸ್ವಚ್ಛತಾ ಆಂದೋಲನ ಸಮಿತಿವತಿಯಿಂದ ಇಲ್ಲಿಯ ಕಾವೇರಿ ನದಿ ದಂಡೆಯಲ್ಲಿ ಸ್ವಚ್ಛತೆ ಹಾಗೂ ಕಾವೇರಿ ಆರತಿ ಪೂಜೆಯ ನಂತರ ಮಾತನಾಡಿದ ಅವರು ಶತಮಾನದ ಸಂಸ್ಕೃತಿಯನ್ನು ಬಿಂಬಿಸುವ ಸಾಕಷ್ಟು ದೇವಾಲಯಗಳು ರಾಮನಾಥಪುರದಲ್ಲಿವೆ. ಪ್ರಸ್ತುತ ಕೆಲವೊಂದು ಪುರಾತನ ದೇವಾಲಯ ಹಾಗೂ ಸ್ಮಾರಕಗಳು ನಿರ್ವಹಣೆ ಇಲ್ಲದೇ ಕಣ್ಮರೆಯಾಗುತ್ತಿರುವುದು ನೋವಿನ ಸಂಗತಿ. ಹಾಗಾಗಿ ಸ್ಥಳೀಯರು ಹಾಗು ಸಂಬಂಧಪಟ್ಟ ಇಲಾಖೆಯವರು ಇತ್ತ ಗಮನಹರಿಸಿ ಅಳಿವಿನಂಚಿನಲ್ಲಿರುವ ಸ್ಮಾರಕಗಳನ್ನು ರಕ್ಷಿಸಬೇಕು ಎಂದು ಮನವಿ ಮಾಡಿದರು

ಕಾವೇರಿ ನದಿ ಸ್ವಚ್ಛತಾ ಆಂದೋಲನ ಜಿಲ್ಲಾ ಸಮಿತಿ ಅಧ್ಯಕ್ಷ ಎಂ.ಎನ್. ಕುಮಾರಸ್ವಾಮಿ ಮಾತನಾಡಿ, ಕಾವೇರಿ ನದಿ ಭಾಗದ ಸ್ವಚ್ಛತೆ ಕಾಪಾಡುವುದರಲ್ಲಿ ಸಮಸ್ತ ನಾಗರಿಕರು ಹಾಗೂ ನಮ್ಮೆಲ್ಲರ ಪಾತ್ರವು ಮುಖ್ಯ. ನಮ್ಮ ಮನೆಯ ಸುತ್ತಮುತ್ತಲ ಪರಿಸರವನ್ನು ಸ್ವಚ್ಛವಾಗಿಟ್ಟುಕೊಂಡು ಆರೋಗ್ಯ ಕಾಪಾಡಿಕೊಳ್ಳಲು ಪ್ರಯತ್ನ ಮಾಡಬೇಕು, ನಮ್ಮ-ನಮ್ಮ ವ್ಯಾಪ್ತಿಯಲ್ಲಿ ಹರಿಯುವ ಕಾವೇರಿ ನದಿ ಸೇರಿದಂತೆ ಜಲಮೂಲಗಳ ಸ್ವಚ್ಛತೆ ಮತ್ತು ಸಂರಕ್ಷಣೆಗಾಗಿ ಜನತೆಗೆ ಅರಿವು ಮತ್ತು ಜಾಗೃತಿ ಮೂಡಿಸುವ ಕಾರ್ಯದಲ್ಲಿ ಎಲ್ಲರ ಸಹಕಾರ ಹಾಗು ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಸ್ವಚ್ಛತಾ ಆಂದೋಲನ ಸಮಿತಿ ಸ್ವಚ್ಛತಾ ಕೆಲಸವನ್ನು ಮಾಡುತ್ತಿದೆ. ಇನ್ನೂ ಹೆಚ್ಚಿನ ರೀತಿ ವಿವಿಧ ಸಂಘ ಸಂಸ್ಥೆಗಳು, ಸಾರ್ವಜನಿಕರೆಲ್ಲರೂ ಸಕ್ರಿಯವಾಗಿ ಪಾಲ್ಗೊಂಡು ಸಹಕರಿಸುವ ಮೂಲಕ ಜೀವನದಿ ಕಾವೇರಿಯ ಸಂರಕ್ಷಣೆಯಲ್ಲಿ ಪಾತ್ರರಾಗಬೇಕು ಎಂದು ಕುಮಾರಸ್ವಾಮಿ ಮನವಿ ಮಾಡುತ್ತಿದೆ.

ವಿಶ್ವ ಮಾನವ ಹಕ್ಕುಗಳ ದಿನಾಚರಣೆ

ಹಾಸನ : ಜಿಲ್ಲೆಯ ಎಲ್ಲಾ ಅಧಿಕಾರಿ/ನೌಕರರು ಮತ್ತು ಸಾರ್ವಜನಿಕರಲ್ಲಿ ಹಾಗೂ ಸ್ಥಳೀಯ ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಮಾನವ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದಕ್ಕಾಗಿ ಡಿ.11 ರಂದು ಬೆಳಗ್ಗೆ10 ಗಂಟೆಗೆ ಹಾಸನದ ಹರ್ಷ ಮಹಲ್ ರಸ್ತೆಯಲ್ಲಿರುವ ಡಾ|| ಬಿ.ಆರ್.ಅಂಬೇಡ್ಕರ್ ಭವನದಲ್ಲಿ ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಯನ್ನು ಹಮಿಕೊಳ್ಳಲಾಗಿದೆ.

ಸದರಿ ಕಾರ್ಯಕ್ರಮಕ್ಕೆ ಜಿಲ್ಲೆಯ ಎಲ್ಲಾ ಅಧಿಕಾರಿಗಳು/ನೌಕರರು/ ಸಾರ್ವಜನಿಕರು ಹಾಗೂ ಸ್ಥಳೀಯ ಸರ್ಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಜರಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಅಪರ ಜಿಲ್ಲಾಧಿಕಾರಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂವಿಧಾನ ವಿರೋಧಿ ಆಡಳಿತದಿಂದ ಭಯದ ವಾತಾವರಣ

ಹಾಸನ: ಚುನಾವಣೆಗಳು ರಾಜಕಾರಣಿಗಳು ಬದುಕನ್ನು ನಿರ್ಧರಿಸುತ್ತವೆ. ಯಾವುದೇ ಒಂದು ಪಕ್ಷದ ಗೆಲುವು ಅದರ ಕಾರ್ಯಕರ್ತರ ಶ್ರಮ ಮತ್ತು ತ್ಯಾಗದ ಪ್ರತಿಫಲವಾಗಿದೆಯೆ ಹೊರತು ಆಡಂಬರ ಹೇಳಿಕೆಗಳಿಂದ ಅಥವಾ ಇತರ ಪಕ್ಷಗಳನ್ನು ವಿರೋಧಿಸುವುದರಿಂದ ಬರುವುದಿಲ್ಲ ಎಂದು ಬಿಎಸ್‌ಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸ್ಟೀವನ್ ಪ್ರಕಾಶ್ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಬಿ.ಎಸ್.ಪಿ ಕಛೇರಿಯಲ್ಲಿ ಪಕ್ಷದ ಮಾಸಿಕ ಸಭೆಯನ್ನುದ್ದೇಶಿಸಿ ಮಾತನಾ ಡಿದ ಅವರು, ರಾಜ್ಯದಲ್ಲಿ ದುರ್ಬಲ ವರ್ಗಗಳಿಗೆ ರಕ್ಷಣೆಯಿಲ್ಲದಂತಾಗಿದೆ. ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದ್ದು ಬಹುಜನರ ಬದುಕು ದುಸ್ತರವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮವರಿಗೆ ಧೈರ್ಯತುಂಬಿ ಅವರನ್ನು ರಾಜಕೀಯ ವಾಗಿ ಜಾಗೃತಿಗೊಳಿಸುವುದು ನಮ್ಮ ಕಾರ್ಯಕರ್ತರ ಕರ್ತವ್ಯವಾಗಬೇಕು. ದೇಶದಲ್ಲಿ ಉಂಟಾಗಿರುವ ಸಂವಿಧಾನ ವಿರೋಧಿ ಆಡಳಿತ ದಿಂದ ತಳಸಮುದಾಯಗಳು ಭಯದ ವಾತಾವರಣದಲ್ಲಿ ಬದುಕುವಂತಾಗಿದೆ. ಇದರ ಲಾಭವನ್ನು ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಪಡೆಯಲು ಹವಣಿಸುತ್ತಿದ್ದು ಈ ಎರಡೂ ಪಕ್ಷಗಳ ಕಾರ್ಯತಂತ್ರಗಳನ್ನು ವಿಫಲಗೊಳಿಸಿ ಮುಂದಿನ ಸರ್ಕಾರದಲ್ಲಿ ನಮ್ಮಗಳ ಪಾಲೂ ಇರುವಂತೆ ನಾವುಗಳು ಕ್ರಿಯಾಶೀಲರಾಗಬೇಕಾಗಿದೆ. ಆದರೆ ಇದು ಅಷ್ಟು ಸುಲಭವಾಗಿ ಸಿಗುವಂತಹದ್ದಲ್ಲ. ಇಂತಹ ಅಧಿಕಾರವು ಬೇಡು ವುದರಿಂದ ಸಿಗುವುದಿಲ್ಲ. ಅದು ಸಾಮಾನ್ಯ ಜನರ ಓಟಿನಿಂದ ದೊರೆಯುತ್ತದೆ. ಅದನ್ನು ಪಡೆಯ ಬೇಕಿದ್ದರೆ ಇಂದಿನಿಂದಲೇ ನಾವುಗಳು ಜನರ ಬಳಿಗೆ ಪಕ್ಷವನ್ನು ಕೊಂಡ್ಯೊಯ್ಯ ಬೇಕಾಗಿದೆ ಎಂದು ತಿಳಿಸಿದರು.

ಬಹುತೇಕ ಎಲ್ಲಾ ಪಕ್ಷಗಳು ಒಂದು ಜಾತಿಯ ಅಥವಾ ಕೋಮಿನ ನಿರ್ದಿಷ್ಠ ಮತದಾರರನ್ನು ಹೊಂದಿರುತ್ತವೆ. ಬಹುಜನ ಸಮಾಜಪಾರ್ಟಿಗೆ ಮೂಲ ಮತದಾರರಾಗಿರುವ ಪರಿಶಿಷ್ಠ ಜಾತಿ ಪಂಗಡಗಳನ್ನು ಒಂದುಗೂಡಿಸುವ ಮೂಲಕ ಅದರ ಜೊತೆಗೆ ಅಲ್ಪಸಂಖ್ಯಾತ ಮತ್ತು ಸಣ್ಣಪುಟ್ಟ ಸಮಾಜಗಳನ್ನು ಬೆಸೆಯುವ ಮೂಲಕ ನಮ್ಮ ಪಕ್ಷವನ್ನು ಸಂಘಟಿಸಬೇಕಾಗಿದೆ. ಇದನ್ನು ಸಾಧಿಸಬೇಕಿದ್ದರೆ ಹತಾಶ ಮನಸ್ಥಿತಿಯವರಿಂದ ಸಾಧ್ಯವಿಲ್ಲ ಎಂದರು.

ಗಂಗಾಧರ್ ಬಹುಜನ್ ಮಾತನಾಡಿ ನಾವು ಮಾಡುವ ಕೆಲಸ ಪ್ರಾಮಾಣಿಕವಾಗಿದ್ದರೆ ಜನರು ನಮ್ಮನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಅದನ್ನು ಕಾರ್ಯಗತ ಮಾಡುವ ಮನಸ್ಥಿತಿ ನಮ್ಮಲ್ಲಿರಬೇಕು. ಹಳೆಯ ನೆನಪುಗಳನ್ನು ಮರೆತು ಹೊಸ ಹುರುಪಿನಿಂದ ಪಕ್ಷಸಂಘಟನೆ ಯಲ್ಲಿ ತೊಡಗಬೇಕು. ಪಕ್ಷದಿಂದ ಹೊರ ಗಿರುವ ವಿವಿಧ ಸಮಾಜದ ಮುಖಂ ಡರನ್ನು ಪಕ್ಷದಲ್ಲಿ ಸಂಯೋಜನೆಗೊ ಳಿಸುವ ಮೂಲಕ ಜಿಲ್ಲೆಯಲ್ಲಿ ಪಕ್ಷವನ್ನು ಪ್ರಬಲ ಶಕ್ತಿಯಾಗಿ ಬೆಳೆಸಬೇಕಾಗಿದೆ ಎಂದರು.

ಬಿಎಸ್‌ಪಿ ಜಿಲ್ಲಾ ಖಜಾಂಚಿ ಕೆ.ವೈ. ಜಗದೀಶ್, ಜಿಲ್ಲಾಧ್ಯಕ್ಷ ಎ.ಪಿ. ಅಹಮದ್, ಜಿಲ್ಲಾ ಕಾರ್ಯದರ್ಶಿ ಎಂ.ಶಿವಣ್ಣ, ಮಲ್ಲಿಕ್, ಕೇಶವಮೂರ್ತಿ, ಚಂದನ್‌ಗೌಡ, ಕಾಡ್ಲೂರು ಮೋಹನ್, ಪರಮೇಶ್ ಉಪಸ್ಥಿತರಿದ್ದರು.

ಹಾಸನದ 2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ

ಸಿ.ಮಿಸ್. 963/2017.

ಅರ್ಜಿದಾರರು: ರಾಮಕೃಷ್ಣ ಬಿನ್ ಮರಿಗೌಡ, ಸುಮಾರು 60ವರ್ಷ, ಕೆಂಚಟಹಳ್ಳಿ ಗ್ರಾಮ, ಕಸಬಾ ಹೋಬಳಿ, ಹಾಸನ ತಾಲ್ಲೂಕು.

::ವಿರುದ್ಧ::

ರೆಸ್ಪಾಂಡೆಂಟರು : ತಹಶೀಲ್ದಾರ್‌ರವರು, ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಹಾಸನ ತಾಲ್ಲೂಕು, ಹಾಸನ

ಪತ್ರಿಕಾ ಪ್ರಕಟಣೆ

ಅರ್ಜಿದಾರರು ಹಾಸನ ತಾಲ್ಲೂಕು, ಕಸಬಾ ಹೋಬಳಿ, ಕೆಂಚಟಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ರಾಮಕೃಷ್ಣರವರ ತಾತನಾದ **ತಿಮ್ಮೇಗೌಡ ಬಿನ್ ಮರಿಗೌಡ** ರವರು ದಿನಾಂಕ: 10/08/1961 ರಂದು ಮೇಲ್ಕಂಡ ವಿಳಾಸದಲ್ಲಿ ಮರಣ ಹೊಂದಿರುತ್ತಾರೆಂದು ಅರ್ಜಿದಾರರ ತಾತನ ಮರಣ ಪ್ರಮಾಣ ಪತ್ರವು ಸಂಬಂಧಪಟ್ಟ ಕಛೇರಿಯಲ್ಲಿ ನೋಂದಣಿಯಾಗಿಲ್ಲವೆಂದು ಅರ್ಜಿದಾರರ ತಾತನಾದ **ತಿಮ್ಮೇಗೌಡ ಬಿನ್ ಮರಿಗೌಡ** ರವರ ಮರಣ ಪ್ರಮಾಣ ಪತ್ರವು ಅತ್ಯವಶ್ಯಕವಾಗಿ ಬೇಕಾಗಿರುತ್ತದೆಂದು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ತಂದಿರುತ್ತಾರೆ. **ತಿಮ್ಮೇಗೌಡ ಬಿನ್ ಮರಿಗೌಡ** ರವರು ಕೆಂಚಟಹಳ್ಳಿ ಗ್ರಾಮದವರಾಗಿದ್ದು, ಸದರಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆಂದು ಅರ್ಜಿಯಲ್ಲಿ ತಿಳಿಸಿರುತ್ತಾರೆ. ಅರ್ಜಿದಾರರ ತಾತನಾದ ತಿಮ್ಮೇಗೌಡ ಬಿನ್ ಮರಿಗೌಡ ರವರ ವಾರಸುದಾರರು ಯಾರಾದರೂ ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ: 12/01/2018ರಂದು ಪೂರ್ವಾಹ್ನ11 ಗಂಟೆಗೆ ನೀವುಗಳು ಖುದ್ದಾಗಿ ಅಥವಾ ಸರಿಯಾಗಿ ಮಾಹಿತಿ ಪಡೆದಿರುವ ವಕೀಲರ ಮೂಲಕ ನ್ಯಾಯಾಲಯದಲ್ಲಿ ಹಾಜರಾಗಬೇಕೆಂದು ಇದಕ್ಕೆ ತಪ್ಪಿದ್ದರೆ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ವಿಚಾರಣೆ ಮಾಡಲಾಗುವುದೆಂದು ಮತ್ತು ತೀರ್ಮಾನಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. 2017ನೇ ವರ್ಷದ 05/12/2017 ನೇ ದಿವಸದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು	ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಕೆ.ಎಂ. ಸರಸ್ವತಿ	ಶಿರಸ್ತೇದಾರರು, ಹಾಸನ 2ನೇ ಅಧಿಕ ಸಿವಿಲ್
ಹಾಸನ, ದಿನಾಂಕ: 05/12/2017	ಜಡ್ಜ್(ಕಿ.ವಿ.) ನ್ಯಾಯಾಲಯದಲ್ಲಿ